**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ**

**ಎಸ್ ಸಿ ನಂ. 125/2023**

**ಪಿರ್ಯಾದುದಾರರು :** ಶ್ರೀನಿವಾಸಪುರ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿತರು :** 1). ರಮೇಶ. ವಿ 42 ವರ್ಷ
ಬಿನ್ ವೆಂಕಟಸ್ವಾಮಿ.

2). ವೆಂಕಟಸ್ವಾಮಿ 69 ವರ್ಷ,
ಬಿನ್ ಲೇಟ್ ರಾಮಣ್ಣ

ಇಬ್ಬರೂ ವಾಸಃ ಚಿರುವನಹಳ್ಳಿ ಗ್ರಾಮ,
ಶ್ರೀನಿವಾಸಪುರ ತಾಲ್ಲೂಕು.

**: ದೋಷಾರೋಪಣೆ :**

ಶ್ರೀ ಹೆಚ್.ದೇವರಾಜು, ಬಿ.ಎ,. ಎಲ್.ಎಲ್.ಬಿ., ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಆದ ನಾನು ಈ ಕೆಳಕಂಡಂತೆ ನಿಮ್ಮ ವಿರುದ್ಧ ದೋಷಾರೋಪಣೆಯನ್ನು ಹೊರಿಸುತ್ತಿದ್ದೇನೆ.

ಮೃತ ಶೋಭ ರವರು ಬ್ಯೂಟಿ ಪಾರ್ಲರ್ ಇಟ್ಟುಕ್ಕೊಂಡಿದ್ದು, 1 ನೇ ಆರೋಪಿಯಾದ ನೀವು ಚಾಸಾ 25 ರಾಧ ರವರನ್ನು ಒಮ್ಮೆ ಮೃತಳ ಬ್ಯೂಟಿ ಪಾರ್ಲರ್ ಗೆ ಕರೆದುಕೊಂಡು ಹೋಗಿದ್ದು, ಆಗ 1 ನೇ ಆರೋಪಿಯಾದ ನೀವು ಮೃತಳಿಗೆ ಪರಿಚಯವಾಗಿ, 1 ನೇ ಆರೋಪಿಯಾದ ನೀವು ಮೃತಳೊಂದಿಗೆ ಅಕ್ರಮ ಸಂಭಂದ ಇಟ್ಟುಕ್ಕೊಳ್ಳಲು ಕೇಳಿದ್ದು ಅದಕ್ಕೆ ಮೃತಳು ತನ್ನ ಸಂಸಾರವನ್ನು ನೋಡಿಕೊಳ್ಳುವುದಾದರೆ ಅಕ್ರಮ ಸಂಭಂದ ಇಟ್ಟುಕ್ಕೊಳ್ಳುತ್ತೇನೆಂದು ಹೇಳಿದ್ದು, ಅದಕ್ಕೆ 1 ನೇ ಆರೋಪಿಯಾದ ನೀವು ಮೃತಳೊಂದಗೆ ಅಕ್ರಮ ಸಂಭಂದ ಇಟ್ಟುಕ್ಕೊಂಡಿದ್ದು ಮೃತಳ ಮಕ್ಕಳ ಫೀಸ್ ಕಟ್ಟಬೇಕೆಂದು, ಗಂಡನ ಸಾಲ

ತೀರಿಸಬೇಕೆಂದು, ಬ್ಯೂಟಿ ಪಾರ್ಲರ್ ಗೆ ಚೇರುಗಳು ಬೇಕೆಂದು, ಚೀಟಿಗೆ ಬೇಕೆಂದು ಇನ್ನು ಇತರೆ ಕಾರಣಗಳನ್ನು ಕೊಟ್ಟು 1 ನೇ ಆರೋಪಿಯಾದ ನಿಮ್ಮ ಬಳಿಯಿಂದ ಸುಮಾರು ಕಾಸು ತೆಗೆದುಕೊಂಡಿದ್ದು, ಇದಲ್ಲದೇ ಪ್ರತಿ ತಿಂಗಳು 1 ನೇ ಆರೋಪಿಯಾದ ನೀನು ಮೃತಳ ಮನೆಯ ಖರ್ಚಿಗೆ ಕಾಸು ಕೊಡುತ್ತಿದ್ದು, ಮನೆಗೆ ಹಾಲು, ತರಕಾರಿ,ಚಿಕನ್ ಇತ್ಯಾದಿಗಳನ್ನು ತೆಗೆದುಕೊಂಡು ಹೋಗಿ ಕೊಡುತ್ತಿದ್ದಿರಿ.

1 ನೇ ಆರೋಪಿಯಾದ ನೀನು ಹಾಗೂ ಮೃತಳು ಆವಲಕುಪ್ಪ ಗ್ರಾಮದ ಸಮೀಪ ಇರುವ 1 ನೇ ಆರೋಪಿಯಾದ ನಿಮ್ಮ ಚಿಕ್ಕಪ್ಪ ಮತ್ತು ಚಾಸಾ 37 ಮುನಿನಾರಾಯಣಪ್ಪ ರವರ ಜಮೀನಿನಲ್ಲಿ ಟಮೋಟೋ ಬೆಳೆ ಮಾಡಿ ಟೊಮೋಟೋಗಳನ್ನು ಕೋಲಾರದ ಚಾಸಾ 45 ದೇವರಾಜ ರವರ ಮಂಡಿಗೆ ಮೃತಳ ಹೆಸರಿನಲ್ಲಿ ಹಾಕುತ್ತಿದ್ದು, ಮೃತಳು 1 ನೇ ಆರೋಪಿಯಾದ ನೀನು ಅಲ್ಲದೇ ಚಾಸಾ 33 ಚೌಡಾರೆಡ್ಡಿ ರವರೊಂದಿಗೆ ಓಡಾಡುತ್ತಿದ್ದು, 1 ನೇ ಆರೋಪಿಯಾದ ನಿನಗೆ ಈ ವಿಷಯ ಗೊತ್ತಾಗಿ ಮೃತಳ ಮೇಲೆ ಗಲಾಟೆ ಮಾಡಿದ್ದು, ಇನ್ನು ಮುಂದೆ ಓಡಾಡುವುದಿಲ್ಲವೆಂದು ಮೃತಳು 1 ನೇ ಆರೋಪಿಯಾದ ನಿನಗೆ ಮಾತು ಕೊಟ್ಟಿದ್ದು, ನಂತರದ ದಿನಗಳಲ್ಲಿ ಸಹ ಮೃತಳು ಚಾಸಾ 33 ರವರೊಂದಿಗೆ ಓಡಾಡುತ್ತಿದ್ದು, ಕಳೆದ ಗಣೇಶ ಹಬ್ಬಕ್ಕೆಂದು 1 ನೇ ಆರೋಪಿಯಾದ ನೀವು ಮಕ್ಕಳಿಗೆ ಬಟ್ಟೆಗಳನ್ನು ತೆಗೆದುಕೊಳ್ಳಲು ಚಾಸಾ 42 ಬಾಬು ಹೆಚ್ ಎಸ್ ರವರ ಬಟ್ಟೆ ಅಂಗಡಿಗೆ ಹೋದಾಗ ಮೃತಳು ಮತ್ತು ಚಾಸಾ 33 ರವರು 1 ನೇ ಆರೋಪಿಯಾದ ನಿನಗಿಂತಲೂ ಮೊದಲೇ ಬಟ್ಟೆ ಅಂಗಡಿಯಲ್ಲಿ ಇದ್ದುದ್ದನ್ನು ಕಂಡು 1 ನೇ ಆರೋಪಿಯಾದ ನೀನು ಬೇಸರಗೊಂಡಿದ್ದು, ನಂತರವೂ ಮೃತಳು ಕಾಸಿಗಾಗಿ 1 ನೇ ಆರೋಪಿಯಾದ ನಿನ್ನನ್ನು ಪೀಡಿಸುತ್ತಿದ್ದು, ಕಾಸು ಕೊಡಲಿಲ್ಲವೆಂದರೆ ನಾನು ನೀನು ಜೊತೆಯಲ್ಲಿ ಮಲಗಿರುವುದನ್ನು ವಿಡಿಯೋ ಮಾಡಿದ್ದೇನೆ ಅದನ್ನು ನಿನ್ನ ಹೆಂಡತಿಗೆ ಕಳುಹಿಸುತ್ತೇನೆಂದು ಮೃತಳು 1 ನೇ ಆರೋಪಿಯಾದ ನಿನಗೆ ಹೆದರಿಸಿ ಬೇಕಾದಾಗಲೆಲ್ಲಾ ಹಣ ಪಡೆದುಕೊಳ್ಳುತ್ತಿದ್ದಳು.

ಒಂದು ದಿನ ಚಾಸಾ 33 ರವರು ಮೃತಳ ಬ್ಯೂಟಿ ಪಾರ್ಲರ್ ಹತ್ತಿರ ಇದ್ದುದ್ದನ್ನು 1 ನೇ ಆರೋಪಿಯಾದ ನೀನು ನೋಡಿ ಕೋಪಗೊಂಡು ಬೈರೆಡ್ಡಿ ಸರ್ಕಾರಿ ಶಾಲೆಯ ಬಳಿ ನಿಂತು ಅವರನ್ನು ಗಮನಿಸುತ್ತಿದ್ದಾಗ, ಚಾಸಾ 33 ರವರು ದ್ವಿಚಕ್ರ ವಾಹನವನ್ನು 1 ನೇ ಆರೋಪಿಯಾದ ನಿಮಗೆ ಟಚ್ ಮಾಡಿಕೊಂಡು ಹೋಗಿದ್ದು, ಬೇಕು ಎಂದಾಗಲೆಲ್ಲಾ ಬ್ಲಾಕ್ ಮೇಲ್ ಮಾಡಿ ಮೃತಳು ನನ್ನ ಬಳಿ ಕಾಸು ತೆಗೆದುಕೊಂಡು ಬೇರೆಯವರ ಜೊತೆ ಓಡಾಡುತ್ತಿದ್ದಾಳೆ ಇವಳು ಬದುಕಿದ್ದರೆ ಕಾಸಿಗಾಗಿ ಬ್ಲಾಕ್ ಮೇಲ್ ಮಾಡುತ್ತಲೇ ಇರುತ್ತಾಳೆ, ಇವಳನ್ನು ಮುಗಿಸಿ ಬಿಡಬೇಕು ಎಂದು 1 ನೇ ಆರೋಪಿಯಾದ ನೀನು ತೀರ್ಮಾನಿಸಿ ದಿನಾಂಕ 05.03.2023 ರಂದು ಭಾನುವಾರ 1 ನೇ ಆರೋಪಿಯಾದ ನೀನು ಮೃತಳಿಗೆ ಫೋನ್ ಮಾಡಿದ್ದು, ಆಗಲೂ ಮೃತಳು ತನಗೆ ರೂ. 30,000/-ಗಳ ಮೊಬೈಲ್ ಫೋನ್ ಬೇಕೆ ಬೇಕೆಂದು ಕೇಳಿದ್ದು, ಅದಕ್ಕೆ 1 ನೇ ಆರೋಪಿಯಾದ ನೀವು ನಾಳೆ ತೆಗೆದುಕೊಡುತ್ತೇನೆ ತೋಟದ ಹತ್ತಿರ ಬಾ ಎಂದು ಕರೆದಾಗ ಅದಕ್ಕೆ ಮೃತಳು ನಾನು ಊರಿಗೆ ಹೋಗಿದ್ದೇನೆ ಬಂದ ಮೇಲೆ ನಾನೇ ಫೋನ್ ಮಾಡ್ತೀನಿ ಎಂದು ಹೇಳಿದಾಗ 1 ನೇ ಆರೋಪಿಯಾದ ನೀನು ಮೃತಳನ್ನು ಕೊಲೆ ಮಾಡಲು ಸಂಚು ರೂಪಿಸಿಕೊಂಡು, 1 ನೇ ಆರೋಪಿಯಾದ ನೀನು ಆವಲಕುಪ್ಪ ಗ್ರಾಮದಲ್ಲಿನ ಅವರ ಅಜ್ಜಿ ಮನೆಯಿಂದ ಮೊದಲೇ ಒಂದು ಚಾಕುವನ್ನು ತೆಗೆದುಕೊಂಡು ಹೋಗಿ ತೋಟದಲ್ಲಿನ ಶೆಡ್ ನಲ್ಲಿ ಇಟ್ಟಿರುತ್ತೀರಿ. ದಿನಾಂಕ 06.03.2023 ರಂದು ಸೋಮವಾರ ಬೆಳಗ್ಗೆ 8.30 ಗಂಟೆಗೆ 1 ನೇ ಆರೋಪಿಯಾದ ನೀವು ಮೃತಳಿಗೆ ಫೋನ್ ಮಾಡಿದ್ದು, ಅದಕ್ಕೆ ಮೃತಳು ಟೌನ್ ಗೆ ಬಂದ ಮೇಲೆ ಫೋನ್ ಮಾಡ್ತೀನಿ ಎಂದು ಹೇಳಿದ್ದು, 1 ನೇ ಆರೋಪಿಯಾದ ನೀವು ಕೆಎ 07 ಆರ್ 4101 ದ್ವಿಚಕ್ರ ವಾಹನದಲ್ಲಿ ಆವಲಕುಪ್ಪದ ತೋಟದ ಬಳಿಗೆ ಹೋಗಿದ್ದು ಮೃತಳು ಊರಿಂದ ಬಂದ ಮೇಲೆ ಬೆಳಗ್ಗೆ 10.45 ಗಂಟೆಗೆ 1 ನೇ ಆರೋಪಿಯಾದ ನಿಮಗೆ ಫೋನ್ ಮಾಡಿದ್ದು, ಅದಕ್ಕೆ 1 ನೇ ಆರೋಪಿಯಾದ ನೀವು ತೋಟದ ಹತ್ತಿರ ಇದ್ದೀನಿ ಬಾ ಎಂದು

ಕರೆದಿದ್ದರಿಂದು ಮೃತಳು ಆಕೆಯ ಮಗನಾದ ಚಾಸಾ 4 ವಿಷ್ಣು ಅಲಿಯಾಸ್ ವಿಷ್ಣುಯಾದವ್ ರವರಿಗೆ ರಮೇಶ ಅಂಕಲ್ ಕಾಸು ಕೊಡ್ತೀನಿ ಎಂದು ಹೇಳಿದ್ದಾರೆ ಆವಲಕುಪ್ಪ ಗ್ರಾಮದ ತೋಟದ ಬಳಿಗೆ ಹೋಗಿ ರಮೇಶ್ ಅಂಕಲ್ ನಿಂದ ಕಾಸು ತೆಗೆದುಕೊಂಡು ಬರುತ್ತೇನೆಂದು ಹೇಳಿ ಅದೇ ದಿನ ಬೆಳಗ್ಗೆ ಸುಮಾರು 11.00 ಗಂಟೆಗೆ ಮೃತಳು ಗಾಡಿಯಲ್ಲಿ 1 ನೇ ಆರೋಪಿಯಾದ ನಿಮ್ಮ ತೋಟದ ಹತ್ತಿರ ಹೋದಾಗ 1 ನೇ ಆರೋಪಿಯಾದ ನೀನು ಮೃತಳನ್ನು ತೋಟದಲ್ಲಿನ ಶೆಡ್ ಒಳಗೆ ಕರೆದುಕೊಂಡು ಹೋಗಿ ಚೇರ್ ಮೇಲೆ ಕೂರಿಸಿ ಕೊಲೆ ಮಾಡಲು ಪಿತೂರಿ ಮಾಡಿರುತ್ತೀರಿ ಕಾರಣ ಆರೋಪಿಗಳಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 120 ಬಿ ಸಹವಾಚಕ 34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ 1 ನೇ ಆರೋಪಿಯಾದ ನೀನು ಮೃತಳನ್ನು ಬೇಕು ಎಂದಾಗಲೆಲ್ಲಾ ನೀನು ನನ್ನ ಕಾಸು ತೆಗೆದುಕೊಂಡು ನನ್ನನ್ನು ಯಾಮಾರಿಸಿ ಬೇರೆಯವರೊಂದಿಗೆ ಓಡಾಡುತ್ತಿದ್ದೀಯಾ ಆದ್ದರಿಂದ ನಾನು ನಿನ್ನನ್ನು ಮಡಗಲ್ಲ ನಿನನ್ನನ್ನು ಮಡಗಿದರೆ ನನಗೆ ಫ್ರಾಬ್ಲಂ ಎಂದು ಹೇಳಿ 1 ನೇ ಆರೋಪಿಯಾದ ನೀವು ಮೃತಳ ಕುತ್ತಿಗೆಯಲ್ಲಿದ್ದ ವೇಲ್ ಅನ್ನು ಹಿಂದಕ್ಕೆ ಎಳೆದಿದ್ದು, ಆಗ ಮೃತಳು ಕೆಳಗೆ ಬಿದ್ದು ಹೋಗಿದ್ದು, 1 ನೇ ಆರೋಪಿಯಾದ ನೀನು ಮೃತಳ ಮೇಲೆ ಕುಳಿತುಕೊಂಡು ಮೇಲಿನಿಂದ ಮೃತಳ ಕುತ್ತಿಗೆಗೆ ಸುತ್ತಿ ಎಳೆದಿದ್ದು, ಆಗ ಮೃತಳು 1 ನೇ ಆರೋಪಿಯಾದ ನಿನ್ನ ಮುಖ, ಎದೆ ಹಾಗೂ ಕೈಗಳಿಗೆ ಎಲ್ಲೆಂದರಲ್ಲಿ ಪರಚಿ, ಕಚ್ಚಿ ಗಾಯಪಡಿಸಿದ್ದು, ಆಗ 1 ನೇ ಆರೋಪಿಯಾದ ನೀನು ಪಕ್ಕದಲ್ಲೇ ಇಟ್ಟಿದ್ದ ಚಾಕನ್ನು ಎತ್ತಿಕೊಂಡು ಮೃತಳ ಕುತ್ತಿಗೆಯನ್ನು ಸ್ವಲ್ಪ ಕೊಯ್ದು ಮೃತಳ ಮೂಗು ಬಾಯನ್ನು ಗಟ್ಟಿಯಾಗಿ ಅದುಮಿಕೊಂಡು ಮೃತಳನ್ನು ಕೊಲೆ ಮಾಡಿರುತ್ತೀರಿ ಕಾರಣ ಆರೋಪಿಗಳಾದ

ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 302 ಸಹವಾಚಕ 34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ 1 ನೇ ಆರೋಪಿಯಾದ ನೀನು ಮೃತಳನ್ನು ಕೊಲೆ ಮಾಡಿ ಮೃತ ದೇಹವನ್ನು ಕವರ್ ನಲ್ಲಿ ಪ್ಯಾಕ್ ಮಾಡಿ ಮೃತ ದೇಹವನ್ನು ಶೆಡ್ ನಲ್ಲಿ ಬಚ್ಚಿಟ್ಟು ಮೃತಳ ಕೊರಳಲ್ಲಿದ್ದ ಬಂಗಾರದ ಚೈನ್ ತೆಗೆದುಕೊಂಡು, ರಕ್ತಗಲೆಗಳಾಗಿದ್ದ 1 ನೇ ಆರೋಪಿಯಾದ ನಿನ್ನ ಬಟ್ಟೆಗಳನ್ನು ಬಿಚ್ಚಿ ಶೆಡ್ ನಲ್ಲಿ ಇಟ್ಟು ಮೃತಳ ಕುತ್ತಿಗೆಯನ್ನು ಕೊಯ್ಯಲು ಉಪಯೋಗಿಸಿದ್ದ ಚಾಕುವನ್ನು ಶೆಡ್ ನಲ್ಲಿ ಬಚ್ಚಿಟ್ಟು , ಮೃತಳ ಗಾಡಿಯನ್ನು ತೆಗೆದುಕೊಂಡು ಹೋಗಿ ವೆಂಕಟರೆಡ್ಡಿ ರವರ ಮಾವಿನ ತೋಟದಲ್ಲಿ ಬಿಟ್ಟು 1 ನೇ ಆರೋಪಿಯಾದ ನೀನು ನಿನ್ನ ಗಾಡಿಯಲ್ಲಿ ಚಾಸಾ 46 ಮುನಿರಾಜು ಹಾಗೂ ಚಾಸಾ 47 ಶ್ರೀನಿವಾಸ್ಪ ರವರ ಬಳಿ ಹೋಗಿ ಅವರಿಗೆ ಕೊಲೆಯ ಬಗ್ಗೆ ತಿಳಿಸಿ ಮೃತ ದೇಹವನ್ನು ಬೇರೆ ಕಡೆಗೆ ಸಾಗಿಸಿಕೊಂಡು ಹೋಗಿ ಸುಟ್ಟು ಹಾಕಲು ಸಹಾಯ ಮಾಡುವಂತೆ ಕೇಳಿದ್ದು, ಅದಕ್ಕೆ ಚಾಸಾ 46 ಮತ್ತು 47 ಒಪ್ಪದ ಕಾರಣ 1 ನೇ ಆರೋಪಿಯಾದ ನೀನು ಗಾಡಿಯಲ್ಲಿ ಚಿರುವನಹಳ್ಳಿ ಗ್ರಾಮಕ್ಕೆ ಹೋಗಿ ಮೃತಳ ಬಂಗಾರದ ಚೈನನ್ನು, ನಿನ್ನ ಬಾಬತ್ತು ಕೆಎ 07 ಆರ್ 4101 ದ್ವಿಚಕ್ರ ವಾಹನದ ಟೂಲ್ ಬಾಕ್ಸ್ ನಲ್ಲಿ ಇಟ್ಟು ದ್ವಿಚಕ್ರ ವಾಹನವನ್ನು ನಿಮ್ಮ ದೊಡ್ಡಪ್ಪನ ಮನೆಯ ಬಳಿ ಬಿಟ್ಟು ಮೃತ ದೇಹವನ್ನು ಸಾಗಿಸಿಕೊಂಡು ಹೋಗಿ ಸುಟ್ಟು ಹಾಕಲು ಸಹಾಯ ಮಾಡುವಂತೆ 2 ನೇ ಆರೋಪಿಯಾದ ನಿಮ್ಮನ್ನು ಕೇಳಿಕೊಂಡು, 2 ನೇ ಆರೋಪಿಯಾದ ನಿಮ್ಮ ಸಹಾಯ ಪಡೆದು ಅದೇ ದಿನ ರಾತ್ರಿ ಆರೋಪಿತರಾದ ನೀವುಗಳು ಕೆಎ 40 ಎಂ 0519 ನೊಂದಣಿ ಸಂಖ್ಯೆಯ ಕಾರಿನಲ್ಲಿ ಶ್ರೀನಿವಾಸಪುರ ಟೌನ್ ಗೆ ಬಂದು ಚಾಸಾ 40 ಅಬೀದ್ ಪಾಷ ರವರ ಅಂಗಡಿಯಲ್ಲಿ ಕಾರಿನ ಚಕ್ರಕ್ಕೆ ಗಾಳಿ ಹಿಡಿಸಿಕೊಂಡು, ಚಾಸಾ 41 ಕೃಷ್ಣಾರೆಡ್ಡಿ ಬಿ ಎನ್ ರವರ ಪೆಟ್ರೋಲ್ ಬಂಕ್ ನಲ್ಲಿ ಕಾರಿಗೆ 800 ರೂಗಳಿಗೆ

ಪೆಟ್ರೋಲ್ ಹಾಕಿಸಿಕೊಂಡು, ಕ್ಯಾನಿಗೆ 200 ರೂಗಳ ಪೆಟ್ರೋಲ್ ಹಾಕಿಸಿಕೊಂಡು ಕಾರಿನಲ್ಲಿ ಶೆಡ್ ಬಳಿಗೆ ಹೋಗಿ ಮೃತ ದೇಹವನ್ನು ಕಾರಿನಲ್ಲಿ ಚಾಸಾ 8 ವೆಂಕಟರಾಮಪ್ಪ ರವರ ಜಮೀನಿಗೆ ಸಾಗಿಸಿಕೊಂಡು ಹೋಗಿ ಅಲ್ಲಿ ಮೃತ ದೇಹದ ಮೇಲೆ ಒಣಗಿದ ಮರದ ಎಲೆಗಳ ಸುರಗನ್ನು ಹಾಕಿ ರಕ್ತ ಕಲೆಗಳಾಗಿದ್ದ 1 ನೇ ಆರೋಪಿಯಾದ ನಿನ್ನ ಬಟ್ಟೆಗಳನ್ನು ಮೃತಳ ಬ್ಯಾಗನ್ನು ಮೃತ ದೇಹದ ಮೇಲೆ ಹಾಕಿ ಚಾಸಾ 41 ರವರ ಪೆಟ್ರೋಲ್ ಬಂಕ್ ನಿಂದ ಕ್ಯಾನಿನಲ್ಲಿ ತೆಗೆದುಕೊಂಡು ಹೋಗಿದ್ದ ಪೆಟ್ರೋಲ್ ಅನ್ನು ಮೃತ ದೇಹದ ಮೇಲೆ ಸುರಿದು ಬೆಂಕಿಯಿಟ್ಟು ಮೃತ ದೇಹವನ್ನು ಸುಟ್ಟು ಬೆಂಕಿಯಲ್ಲಿ 1 ನೇ ಆರೋಪಿಯಾದ ನೀನು ತೊಟ್ಟಿದ್ದ ಬಟ್ಟೆಗಳನ್ನು, ಬಾಡಿಯನ್ನು ಪ್ಯಾಕ್ ಮಾಡಲು ಬಳಸಿದ್ದ ಪ್ಲಾಸ್ಟಿಕ್ ಕವರ್ ಅನ್ನು ಹಾಕಿ ಎಲ್ಲವನ್ನು ಸುಟ್ಟು ಕೃತ್ಯಕ್ಕೆ ಬಳಸಿದ್ದ ಕಾರನ್ನು ನೀರಿನಲ್ಲಿ ತೊಳೆದು ಕಾರನ್ನು ಚುಂಚದೇನಹಳ್ಳಿ ಗ್ರಾಮದಲ್ಲಿ ಬಿಟ್ಟು ಸಾಕ್ಷ್ಯಾಧಾರಗಳನ್ನು ನಾಶಪಡಿಸಿರುತ್ತೀರಿ ಕಾರಣ ಆರೋಪಿಗಳಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 201 ಸಹವಾಚಕ 34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಈ ಮೇಲಿನ ಆರೋಪಗಳಿಗೆ ನೀವು ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ : 19 ನೇ ಡಿಸೆಂಬರ್ – 2023.**

(ಹೆಚ್.ದೇವರಾಜು)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.